# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
## ಕೇಂದ್ರ ಕಛೇರಿ : ಸಂಚಾರ ಇಲಾಖೆ : ಬೆಂಗಳೂರು

ಸಂ.ಕರಾಸಾ/ಕೇಕ/ಸಂ/ಸಾ/ಎಫ್-24/ 1059 /16-17 ದಿನಾಂಕ: 25/05/2016.

## ಸುತ್ತೋಲೆ- 1334/2016-17

ವಿಷಯ: ಕರಾರಸಾ ನಿಗಮದಿಂದ ಆಚರಣೆ ಮಾಡುತ್ತಿರುವ ಹವಾನಿಯಂತ್ರಿತ ಸಾರಿಗೆಗಳ ಆದಾಯದ ಮೇಲೆ ಸೇವಾ ತೆರಿಗೆ ಪಾವತಿಸುವ ಬಗ್ಗೆ.

ಉಲ್ಲೇಖ: ಲೆಕ್ಕ ಪತ್ರ ಇಲಾಖೆಯಿಂದ ಹೊರಡಿಸಿರುವ ಸುತ್ತೋಲೆ ಸಂಖ್ಯೆ-02/2016, ದಿನಾಂಕ: 20/05/2016.

*********

ನಿಗಮದಿಂದ ಆಚರಣೆ ಮಾಡಲಾಗುತ್ತಿರುವ ಹವಾನಿಯಂತ್ರಿತ (Air Conditioned Services) ಸಾರಿಗೆಗಳ ಪ್ರಯಾಣ ದರದ ಮೇಲೆ ಶೇ 6 ರಷ್ಟು ಸೇವಾ ತೆರಿಗೆ(Service Tax)ಯನ್ನು ದಿನಾಂಕ: 01/06/2016ರಿಂದ ಜಾರಿಗೆ ಬರುವಂತೆ ಪಾವತಿಸಲು ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

1. ಕರಾರಸಾ, ವಾಕರಸಾ ಮತ್ತು ಈಕರಸಾ ಸಂಸ್ಥೆಗಳಿಂದ ಆಚರಣೆ ಮಾಡುತ್ತಿರುವ ಹವಾನಿಯಂತ್ರಿತ (Air Conditioned Services) ಸಾರಿಗೆಗಳ ಒಟ್ಟು ಪ್ರಯಾಣ ದರದ ಮೇಲೆ ಶೇ 6 ರಷ್ಟು ಸೇವಾ ತೆರಿಗೆಯನ್ನು ದಿನಾಂಕ: 01/06/2016ರಿಂದ ಜಾರಿಗೆ ಬರುವಂತೆ ಪ್ರಯಾಣಿಕರಿಂದ ಪಡೆದುಕೊಳ್ಳುವುದು.
2. ಸೇವಾ ತೆರಿಗೆಯನ್ನು ಲೆಕ್ಕಾಚಾರ ಮಾಡಿ ಮುಂದಿನ ರೂ. ಗಳಿಗೆ ರೌಂಡಿಂಗ್ ಅಫ್ ಮಾಡುವುದು ಹಾಗೂ ಸದರಿ ಸೇವಾ ತೆರಿಗೆ ಶುಲ್ಕವನ್ನು ಟಿಕೇಟ್‌ಗಳಲ್ಲಿ ಪ್ರತ್ಯೇಕವಾಗಿ ಮುದ್ರಿತವಾಗುವಂತೆ ಕ್ರಮ ವಹಿಸುವುದು.
3. ಹವಾನಿಯಂತ್ರಿತ (Air Conditioned Services) ಸಾರಿಗೆಗಳಲ್ಲಿ ಪ್ರಯಾಣಿಕರೊಂದಿಗೆ ಸಾಗಾಣಿಕೆ ಮಾಡುವ ಲಗೇಜು ದರದ ಮೇಲೆ ಶೇ 6 ರಷ್ಟು ಸೇವಾ ತೆರಿಗೆಯನ್ನು ದಿನಾಂಕ: 01/06/2016ರಿಂದ ಜಾರಿಗೆ ಬರುವಂತೆ ಲಗೇಜು ಸಾಗಾಣಿಕೆ ಮಾಡುವ ಪ್ರಯಾಣಿಕರಿಂದ ಪಡೆದುಕೊಳ್ಳುವುದು.
4. ಪ್ರಯಾಣ ದರದ ಮತ್ತು ಲಗೇಜು ದರದ ಮೇಲಿನ ಸೇವಾ ತೆರಿಗೆ ಮೊತ್ತವನ್ನು ಲೆಕ್ಕಪತ್ರ ಇಲಾಖೆಯಿಂದ ನೀಡುವ ಪ್ರತ್ಯೇಕ ಲೆಕ್ಕ ಪತ್ರ ಶೀರ್ಷಿಕೆಯಡಿಯಲ್ಲಿ ಇಡಲು ಕ್ರಮ ಕೈಗೊಳ್ಳುವುದು.
5. ಈಗಾಗಲೇ ಮುಂಗಡ ಕಾಯ್ದಿರಿಸಿದ ಪ್ರಯಾಣಿಕರ ಪ್ರಯಾಣ ದರದ ಟಿಕೇಟ್ ಮೊತ್ತದ ಮೇಲೆ ಶೇ 6 ರಷ್ಟು ಸೇವಾ ತೆರಿಗೆಯನ್ನು ಲೆಕ್ಕಾಚಾರ ಮಾಡಿ, ನಿರ್ವಾಹಕರ ಮೂಲಕ Pre Printed ಟಿಕೇಟ್‌ಗಳನ್ನು ವಿತರಿಸಲು (with combination) ಹಾಗೂ ಸದರಿ ಟಿಕೇಟ್‌ಗಳ ಹಿಂಬದಿಯಲ್ಲಿ ಸೇವಾ ತೆರಿಗೆ ಶುಲ್ಕದ ಟಿಕೇಟ್ ಎಂದು ನಮೂದಿಸಿ ನಿರ್ವಾಹಕರು ಸಹಿ ಮಾಡಿ ವಿತರಿಸಲು ಕ್ರಮ ವಹಿಸುವುದು.
6. ಸೇವಾ ತೆರಿಗೆಗೆ ಸಂಬಂಧಿಸಿದಂತೆ ಅವತಾರ್ ಮತ್ತು ಇಟಿಎಂ ತಂತ್ರಾಂಶದಲ್ಲಿ ಸೂಕ್ತ ಬದಲಾವಣೆಗಳನ್ನು ದಿನಾಂಕ:31/05/2016ರೊಳಗಾಗಿ ಗಣಕ ಇಲಾಖೆಯಿಂದ ಮಾಡಲು ಹಾಗೂ ದಿನಾಂಕ: 01/06/2016ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
7. ಅವತಾರ್ ಮತ್ತು ಇಟಿಎಂ ತಂತ್ರಾಂಶದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ವಿಳಂಬವಾದ್ದಲ್ಲಿ, (ತಂತ್ರಾಂಶದಲ್ಲಿ ಬದಲಾವಣೆಗಳನ್ನು ಮಾಡುವ ದಿನಾಂಕದವರೆಗೆ), ಪ್ರಯಾಣಿಕರ ಪ್ರಯಾಣ ದರದ ಟಿಕೇಟ್ ಮೊತ್ತದ ಮೇಲೆ ಶೇ 6 ರಷ್ಟು ಸೇವಾ ತೆರಿಗೆಯನ್ನು ಲೆಕ್ಕಾಚಾರ ಮಾಡಿ, ನಿರ್ವಾಹಕರ ಮೂಲಕ Pre Printed ಟಿಕೇಟ್‌ಗಳನ್ನು ವಿತರಿಸಲು (with combination) ಹಾಗೂ ಸದರಿ ಟಿಕೇಟ್‌ಗಳ ಹಿಂಬದಿಯಲ್ಲಿ ಸೇವಾ ತೆರಿಗೆ ಶುಲ್ಕದ ಟಿಕೇಟ್ ಎಂದು ನಮೂದಿಸಿ ನಿರ್ವಾಹಕರು ಸಹಿ ಮಾಡಿ ವಿತರಿಸಲು ಕ್ರಮ ವಹಿಸುವುದು.

ಸುತ್ತೋಲೆ ಸ್ವೀಕರಿಸಿದಕ್ಕೆ ಸ್ವೀಕೃತಿ ಮತ್ತು ಅನುಸರಣಾ ವರದಿ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು
ಕರಾರಸಾ ನಿಗಮ

ಪ್ರತಿಯನ್ನು :

ವ್ಯವಸ್ಥಾಪಕ ನಿರ್ದೇಶಕರು ಬೆಂ.ಮ.ನ.ಸಾ.ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾನಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಹಿರಿಯ/ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ ನಿರ್ದೇಶಕರು(ಸಿ:ಪ), ಕರಾರಸಾ ನಿಗಮ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

ವಿಭಾಗೀಯ ಸಂಚಲನಾಧಿಕಾರಿಗಳು, ಅವತಾರ್ ಶಾಖೆ, ಕರಾರಸಾ ನಿಗಮ, ಮೈಸೂರು ರಸ್ತೆ ಬಸ್ ನಿಲ್ದಾಣ,